ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು	
ಅಕ್ಕಿ ರೂಪಾಯಿಗೆ	7¾	6 ರಿಂದ 6½ ವರಿಗೆ	ಸೇರುಗಳು.
ರಾಗಿ ,,	20¾	12½ ರಿಂದ 13½ ವರಿಗೆ	

ವ್ಯವಸಾಯ ಕಾರ್ಯಗಳು—ರಾಗಿ ಕಳೆ ಕೀಳುವದು.

ಮಳೇ ಬಾರದೇ ಇರುವದು ಬಹಳ ಕಷ್ಟವಾಗಿದೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಏನೂ ಇಲ್ಲ.

ನಿಂತಿರುವ ಪೈರುಗಳು—ಹೊಸಕೋಟೆ, ಕ್ಲೋಸ್‌ಪೇಟೆ, ಚನ್ನಪಟ್ಟಣ ಈ ತಾಲ್ಲೂಕುಗಳಲ್ಲಿ ಒಳ್ಳೇ ಸ್ಥಿತಿಯಲ್ಲಿವೆಯೆಂದೂ, ಇತರ ತಾಲ್ಲೂಕುಗಳಲ್ಲಿ ಮಳೆ ಇಲ್ಲದಕಾರಣ ಬಾಡಿಹೋಗುತ್ತಾ ಇವೆಯೆಂದೂ ರಿಪೋರ್ಟಾಗಿದೆ.

ಕುಯ್ಯಲಾದ ಪೈರು—ದೇವನಹಳ್ಳಿ ತಾಲ್ಲೂಕಿನಲ್ಲಿ ಅಲೂಗೆಡ್ಡೆ.

10. ಕಾಲದ ಆಯುತಿಯು ಸುಮಾರಾಗಿದೆ. ಆಹಾರ ಜೆನಸು ಸಾಕು. ಎಲ್ಲಾ ತಾಲ್ಲೂಕುಗಳಲ್ಲಿಯೂ ಬಹಳವಾಗಿ ಬೇಕಾದ್ದ ಮಳೆಯು, ಈಗ ಎಲ್ಲಾ ತಾಲ್ಲೂಕುಗಳಲ್ಲಿಯೂ ಬಿದ್ದಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ, ಕಾರ್ಕಾರ್‌ಹಳ್ಳಿ, ಚನ್ನಪಟ್ಟಣ, ಈ ತಾಲ್ಲೂಕುಗಳಲ್ಲಿಯೂ, ಮತ್ತು ದೊಡ್ಡಬಳ್ಳಾಪುರ, ಹೊಸಕೋಟೆ, ಕಾರ್ಕಾರ್‌ಹಳ್ಳಿ, ಚನ್ನಪಟ್ಟಣ, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್ ಇರುತ್ತಲಿದೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೆಲಮಂಗಲದ ತಾಲ್ಲೂಕಿನಲ್ಲಿ ಕೆರೆಗಳಲ್ಲಿ ಸಾಕಾದಷ್ಟು ನೀರು ಇಲ್ಲದಿರುವದು ಹೊರ್, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

N.B. ಅನೇಕಲ್ಲು ತಾಲ್ಲೂಕಿನಿಂದ ಈಗಿನ ವಾರದ ಸೀಸನ್ ರಿಪೋರ್ಟು ಬಂದಿಲ್ಲ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಬಾರಿಂಗ್‌ಪೇಟೆ, ಶಿಡ್ಲಘಟ್ಟ, ಈ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತದ ಗದ್ದೆಗಳಲ್ಲಿ ಕಳೆ ಕೀಳುತ್ತಿದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾವ ಪೈರುಗಳು—ಕೋಲಾರ, ಮುಳಬಾಗಲು, ಶ್ರೀನಿವಾಸಪುರ, ಇವುಗಳಲ್ಲಿ ಹುರುಳಿ.

ಕುಯ್ಯಲಾದ ಪೈರುಗಳು—ಶ್ರೀನಿವಾಸಪುರ, ಮಾಲೂರು, ಬಾಗೇಪಲ್ಲಿ, ಚಿಂತಾಮಣಿ, ಕೋಲಾರ, ಇವುಗಳಲ್ಲಿ ಸಾವೆ; ಗುಡಿಬಂಡೆಯಲ್ಲಿ ನವಣೆ.

ಕುಯ್ಯಲಾದ ಪೈರುಗಳ ಹುಟ್ಟುವಳಿ :—

ಚಿಂತಾಮಣಿಯಲ್ಲಿ ಸಾವೆ—4 ಆಣೆ.
ಬಾಗೇಪಲ್ಲಿಯಲ್ಲಿ ,, —8 ಆಣೆ.
ಗುಡಿಬಂಡೆಯಲ್ಲಿ ನವಣೆ—4 ರಿಂದ 8 ಆಣೆ ವರಿಗೆ.
ಶ್ರೀನಿವಾಸಪುರದಲ್ಲಿ ಸಾವೆ—ಅಲ್ಪವಾಗಿ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಿಸು ಸಿಕ್ಕುತ್ತವೆ.

11. ಕೋಲಾರದ ಚಿನ್ನದ ಫೀಲ್ಡಿಯಲ್ಲಿಯೂ ಮತ್ತು ಬಾರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿದೂ ಮತ್ತು ಕೋಲಾರದಲ್ಲಿಯೂ ಪ್ಲೇಗ್ ಇರುತ್ತಲಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ, ಆದರೆ, ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ಮಳೇ ಇಲ್ಲದೇ ಇರುವದು ಬಹಳ ಕಷ್ಟವಾಗಿದೆ.

ಬಿತ್ತನೆಯಾದ ಪೈರುಗಳು—ತಿಪಟೂರು ತಾಲ್ಲೂಕು ಮತ್ತು ಕೊರ್ಟಗೆರೆ ತಾಲ್ಲೂಕು ಇವುಗಳಲ್ಲಿ ಹುರುಳಿ, ಮತ್ತು ತಿಪಟೂರಿನಲ್ಲಿ ಚೋಳ.

ಕುಯ್ಯಲಾದ ಪೈರುಗಳು—ಮಧುಗಿರಿ, ಸೀರ್ಯ, ಪಾವಗಡ, ಇವುಗಳಲ್ಲಿ ನಾಟಿ ರಾಗಿ; ಸೀರ್ಯ, ಕೊರ್ಟಗೆರೆ, ಇವುಗಳಲ್ಲಿ ಜೋಳ; ಮತ್ತು ತಿಪಟೂರು, ತುರುವೇಕೆರೆ, ಇವುಗಳಲ್ಲಿ ಭತ್ತ.